ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಫ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 02.12.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಮುನಿಕೃಷ್ಣಪ್ಪ |
| ತಂದೆಯ ಹೆಸರು | - | ದೊಡ್ಡ ಚೆನ್ನಪ್ಪ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ | - | ದ್ಯಾವರಹಳ್ಳಿ |

(15 ರಿಂದ 19 ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಆರೋಪಿತರನ್ನಾಗಿ ಸೇರಿಸಿದ ಮೇಲೆ ಅವರ ಸಮಕ್ಷಮ ಸಾಕ್ಷಿಯ ಮುಖ್ಯ ವಿಚಾರಣೆ ಆಗಿರುವುದಿಲ್ಲ. ಆದ್ದರಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪುನಃ ಮಾಡಲಾಗುತ್ತಿದೆ).

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನ್ಯಾಯಾಲಯದ ಮುಂದಿರುವ 15, 17 ರಿಂದ 19 ಈ ಆರೋಪಿತರ ಪರಿಚಯ ಸಹ ನನಗೆ ಇದೆ. ಗೈರು ಹಾಜರಾಗಿರುವ 16 ನೇ ಆರೋಪಿ ನಾರಾಯಣಸ್ವಾಮಿ ತಂದೆ ವೆಂಕಟಸ್ವಾಮಿ ಈತನ ಪರಿಚಯ ಸಹ ಇದೆ. (ಆತನಿಗೆ ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆತನ ಐಡೆಂಟಿಟಿಯನ್ನು ಆರೋಪಿ ಪರ ವಕೀಲರು ತಕರಾರು ಮಾಡಿರುವುದಿಲ್ಲ).

2. ಈಗ ಸುಮಾರು 12 ವರ್ಷಗಳ ಹಿಂದೆ ಶಿವರಾತ್ರಿ ಹಬ್ಬದ ದಿನ ಸುಮಾರು ಬೆಳಗ್ಗೆ 07.30 ಕ್ಕೆ ಫ್ರಾಸಾ-4 ಇವರ ಮನೆಯ ಹತ್ತಿರ ನಾನು, ಫ್ರಾಸಾ-2 ಮುನಿರಾಜು ಮತ್ತು ಫ್ರಾಸಾ-7 ಗಂಗಪ್ಪ ಮಾತನಾಡಿಕೊಂಡು ಇದ್ದೆವು. ಆಗ 1 ಮತ್ತು 9 ನೇ ಆರೋಪಿತರು ಬೈಕ್ ನಲ್ಲಿ ಮನೆಯ ಹತ್ತಿರ ಬಂದರು. ಅವರಿಬ್ಬರು ಬಂದು ಫ್ರಾಸಾ-4 ಈತನು ಇಟ್ಟಿಗೆ ಕಾಸು ಕೊಡಬೇಕೆಂದು ಕೇಳಿದರು ಮತ್ತು ಮಾತನಾಡುತ್ತಿದ್ದರು. ಅರ್ಧ ಘಂಟೆಯ ನಂತರ ಫ್ರಾಸಾ-4 ಈತ ಬೆಂಗಳೂರಿನಿಂದ ಬಂದ. ನಾರಾಯಣಸ್ವಾಮಿಗೆ ಹಣ ಕೇಳಿದಾಗ ನಾರಾಯಣಸ್ವಾಮಿಯ ಬ್ಯಾಂಕ್ ರಜೆ ಇದೆ, ಸೋಮವಾರ ಕೊಡುತ್ತೇನೆಂದು ಹೇಳಿದ. ಆಗ ತಿಮ್ಮಯ್ಯ ನನಗೆ ಹಣ ಬೇಕೆ ಬೇಕು ಎಂದು ಹೇಳಿದ. ಆಗ ಬಾಯಿಗಲಾಟೆ ಆಯಿತು. ಇನ್ನೊಂದು ಘಂಟೆಯಲ್ಲಿ ಬರುತ್ತೇನೆಂದು ಹೇಳಿ ತಿಮ್ಮಯ್ಯ ಹೋದ.

(ಈ ಹಂತದಲ್ಲಿ ಮಾನ್ಯ ಪಿಪಿರವರು ಉಳಿದ ಆರೋಪಿತರ ಓವರ್ ಟ್ರ್ಯಾಕ್ಟ್ ಬಗ್ಗೆ ಸಾಕ್ಷಿದಾರರು ಆಗಲೇ ಹೇಳಿದ್ದರಿಂದ ಮತ್ತು ಈಗ ಸಾಕ್ಷಿಯ ವಿಚಾರಣೆ 15 ರಿಂದ 19 ನೇ ಆರೋಪಿತರನ್ನು ಸೇರಿಸಿದ ಮೇಲೆ ಅವರ ಬಗ್ಗೆ ಹೇಳಬೇಕಾದ್ದರಿಂದ ಅವರ ಓವರ್ ಟ್ರ್ಯಾಕ್ಟ್ ಗಳಿಗೆ ಸಂಬಂಧಿಸಿದಂತೆ ಅವರ ಸಮಕ್ಷಮ ಹೇಳಿಸುವುದಾಗಿ ತಿಳಿಸುತ್ತಾರೆ.)

3. 15 ನೇ ಆರೋಪಿ ವೆಂಕಟಪ್ಪ ಈತ ಮೃತ ದೊಡ್ಡಚಿನ್ನಪ್ಪನಿಗೆ ಚೂರಿಯಿಂದ ಹೊಟ್ಟೆಗೆ ತಿವಿದ. 16 ನೇ ಆರೋಪಿ ನಾರಾಯಣಸ್ವಾಮಿ ಈತ ಮೃತ ದೇವರಾಜನಿಗೆ ಚಾಕುವಿನಿಂದ ಹೊಟ್ಟೆಗೆ ಚುಚ್ಚಿದ ಮತ್ತು ಆತ ನೆಲಕ್ಕೆ ಬಿದ್ದ ಮೇಲೆ ಆತನ ಬೀಜಕ್ಕೆ ಕಾಲಿನಿಂದ ಒದ್ದ. 19 ನೇ ಆರೋಪಿ ಮುನಿರಾಜು ನನಗೆ ಚಾಕುವಿನಿಂದ ಎಡ ಸೊಂಟದ ಹತ್ತಿರ ಚುಚ್ಚಿದ. 18 ನೇ ಆರೋಪಿ ಮುನಿಯಪ್ಪನ ಮಗ ನಾರಾಯಣಸ್ವಾಮಿ ಈತ ಪ್ರಾಸಾ-2 ಮುನಿರಾಜಪ್ಪನ ತಲೆಗೆ , ಬೆನ್ನಿಗೆ ದೊಣ್ಣೆಯಿಂದ ಹೊಡೆದ. 17 ನೇ ಆರೋಪಿ ವೆಂಕಟೇಶ ಈತ ಪ್ರಾಸಾ-3 ಮಂಜುನಾಥ ಈತನಿಗೆ ದೊಣ್ಣೆಯಿಂದ ತಲೆಗೆ, ಎಡಭುಜಕ್ಕೆ, ಮೈ ತುಂಬಾ ಹೊಡೆದ. ಆ ರೀತಿ ಹೊಡೆದಿದ್ದರಿಂದ ರಕ್ತ ಬಂದಿತ್ತು. (ಸಾಕ್ಷಿದಾರರು ಗಲಾಟೆಯಲ್ಲಿ ಉಪಯೋಗಿಸಿದ ಮು.ಮಾ-1 ರಿಂದ 8 ಆಯುಧಗಳನ್ನು ಮತ್ತು ಮು.ಮಾ-9 ರಿಂದ 15 ಬಟ್ಟೆಗಳನ್ನು ಈ ಮೊದಲೇ ನ್ಯಾಯಾಲಯದಲ್ಲಿ ಗುರ್ತಿಸಿರುತ್ತಾರೆ ಎಂದು ಮಾನ್ಯ ಪಿಪಿರವರು ತಿಳಿಸುತ್ತಾರೆ.)

**<u>ಪಾಟೀ ಸವಾಲುಃ</u>** 15 ರಿಂದ 19 ನೇ ಆರೋಪಿ ಪರವ ಕೀಲರು ತಮ್ಮ ಪರವಾಗಿ ಈಗಾಗಲೇ ಈ ಸಾಕ್ಷಿಯ ಪಾಟೀ ಸವಾಲು ಆಗಿದೆ ಎಂದು ತಿಳಿಸುತ್ತಾರೆ.

(ಸಾಕ್ಷಿಯು ಹಾಜರಿರುವುದರಿಂದ ಮತ್ತು ಕೆಲವೊಂದು ಪ್ರಶ್ನೆಗಳು ಕೇಳುವುದಿದೆ ಎಂದು 5 ಮತ್ತು 6 ನೇ ಆರೋಪಿ ಪರವಕೀಲರು ಅವಕಾಶ ಕೋರಿದ್ದರಿಂದ ಅವರ ಪರವಾಗಿ ಮುಂದುವರಿದ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಶ್ರೀ ಎಸ್ ಎಸ್ ರವರಿಂದ 5 ಮತ್ತು 6 ನೇ ಆರೋಪಿತರ ಪರವಾಗಿ.</u>**

4. ಚಿಕ್ಕವೆಂಕಟರಾಯಪ್ಪ ಎಂಬುವವರು ನನ್ನ ದೊಡ್ಡಪ್ಪ. ನಮ್ಮ ಊರಿನಲ್ಲಿ ಸರ್ವೆ ನಂಬರ್ 110/2 ರಲ್ಲಿ 3 ಎಕರೆ 22 ಗುಂಟೆ ಜಮೀನು ನಮ್ಮ ಮೃತ ದೊಡ್ಡ ಚೆನ್ನಪ್ಪನ ಕುಟುಂಬಕ್ಕೆ ಇದೆ. ಅದು ತಿಂಡ್ಲು ಗ್ರಾಮದ ಸರ್ವೆ ನಂಬರ್ ಎಂದರೆ ಸರಿ. ಆ ಜಮೀನಿನಲ್ಲಿ ಪಾಲು

ಬರಬೇಕೆಂದು ನಾನು, ನನ್ನ ತಾಯಿ ಮತ್ತು ನನ್ನ ತಮ್ಮ ಪ್ರಾಸಾ-3 ಸೇರಿಕೊಂಡು ಪ್ರಾಸಾ-2,ಪ್ರಾಸಾ-4 ಮತ್ತು ಅವರ ತಾಯಿ ಹಾಗೂ ತಂಗಿ ಇವರ ವಿರುದ್ಧ ದೇವನಹಳ್ಳಿ ನ್ಯಾಯಾಲಯದಲ್ಲಿ ನಿಡಿ-28 ರಂತೆ ಅಸಲುದಾವೆ ಸಂಖ್ಯೆ 865/2015 ಅನ್ನು ದಾಖಲಿಸಿದ್ದೇವೆ ಎಂದರೆ ಸರಿ.

5. 15 ನೇ ಆರೋಪಿ ವೆಂಕಟಪ್ಪ ಈತ ಮೃತ ದೊಡ್ಡಚಿನ್ನಪ್ಪನಿಗೆ ಚೂರಿಯಿಂದ ಹೊಟ್ಟೆಗೆ ತಿವಿದ ಎಂದು ಫಿರ್ಯಾದಿಯಲ್ಲಾಗಲೀ ಅಥವಾ ಪೋಲಿಸರಿಗೆ ನೀಡಿದ ನನ್ನ ಹೇಳಿಕೆಯಲ್ಲಾಗಲೀ  ಹೇಳಿಲ್ಲ ಎಂದರೆ ಸರಿಯಲ್ಲ. 16 ನೇ ಆರೋಪಿ ನಾರಾಯಣಸ್ವಾಮಿ ಈತ ಮೃತ ದೇವರಾಜನಿಗೆ ಚಾಕುವಿನಿಂದ ಹೊಟ್ಟೆಗೆ ಚುಚ್ಚಿದ ಮತ್ತು ಆತ ನೆಲಕ್ಕೆ ಬಿದ್ದ ಮೇಲೆ ಆತನ  ಬೀಜಕ್ಕೆ ಕಾಲಿನಿಂದ ಒದ್ದ ಎಂದು ಫಿರ್ಯಾದಿಯಲ್ಲಾಗಲೀ ಅಥವಾ ಪೋಲಿಸರಿಗೆ ನೀಡಿದ ನನ್ನ ಹೇಳಿಕೆಯಲ್ಲಾಗಲೀ  ಹೇಳಿಲ್ಲ ಎಂದರೆ ಸರಿಯಲ್ಲ. 19 ನೇ ಆರೋಪಿ ಮುನಿರಾಜು ನನಗೆ ಚಾಕುವಿನಿಂದ ಎಡ ಸೊಂಟದ ಹತ್ತಿರ ಚುಚ್ಚಿದ ಎಂದು ಫಿರ್ಯಾದಿಯಲ್ಲಾಗಲೀ ಅಥವಾ ಪೋಲಿಸರಿಗೆ ನೀಡಿದ ನನ್ನ ಹೇಳಿಕೆಯಲ್ಲಾಗಲೀ ಹೇಳಿಲ್ಲ ಎಂದರೆ ಸರಿಯಲ್ಲ. 18 ನೇ ಆರೋಪಿ ಮುನಿಯಪ್ಪನ ಮಗ ನಾರಾಯಣಸ್ವಾಮಿ ಈತ ಪ್ರಾಸಾ-2 ಮುನಿರಾಜಪ್ಪನ ತಲೆಗೆ, ಬೆನ್ನಿಗೆ ದೊಣ್ಣೆಯಿಂದ ಹೊಡೆದ ಎಂದು ಫಿರ್ಯಾದಿಯಲ್ಲಾಗಲೀ ಅಥವಾ ಪೋಲಿಸರಿಗೆ ನೀಡಿದ ನನ್ನ ಹೇಳಿಕೆಯಲ್ಲಾಗಲೀ ಹೇಳಿಲ್ಲ ಎಂದರೆ ಸರಿಯಲ್ಲ. 17 ನೇ ಆರೋಪಿ ವೆಂಕಟೇಶ ಈತ ಪ್ರಾಸಾ-3 ಮಂಜುನಾಥ ಈತನಿಗೆ ದೊಣ್ಣೆಯಿಂದ ತಲೆಗೆ, ಎಡಭುಜಕ್ಕೆ, ಮೈ ತುಂಬಾ ಹೊಡೆದ. ಆ ರೀತಿ ಹೊಡೆದಿದ್ದರಿಂದ ರಕ್ತ ಬಂದಿತ್ತು ಎಂದು ಫಿರ್ಯಾದಿಯಲ್ಲಾಗಲೀ ಅಥವಾ ಪೋಲಿಸರಿಗೆ ನೀಡಿದ ನನ್ನ ಹೇಳಿಕೆಯಲ್ಲಾಗಲೀ  ಹೇಳಿಲ್ಲ ಎಂದರೆ ಸರಿಯಲ್ಲ.

6. ನಿಡಿ-2 ಎಂದು ಗುರ್ತಿಸಿದ ಹೇಳಿಕೆಯನ್ನು ಓದಿ ಹೇಳಿ ಆ ರೀತಿ ನೀವು ಹೇಳಿಕೆ ನೀಡಿದ್ದೀರಿ  ಎಂದರೆ ಸರಿಯಲ್ಲ. 15 ರಿಂದ 19 ನೇ ಆರೋಪಿತರು ಸಹ ಗಲಾಟೆ ಮಾಡಿದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು